## <u>ಮಧ್ಯಂತರ ಅರ್ಜಿ ಸಂಖ್ಯೆ - 03 ರ ಕುರಿತಾಗಿ ಆದೇಶ</u>

ತೀರ್ಪುಋಣಿದಾರರು ಪ್ರಸ್ತುತ ಮಧ್ಯಂತರ ಅರ್ಜಿ ಸಂಖ್ಯೆ-03 ನ್ನು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 4(ಎ) ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿ, ಅಮಲ್ಜಾರಿ ಅನುಸೂಚಿತ ಸ್ವತ್ತನ್ನು ಅಳತೆ ಮಾಡಿ ವರದಿಯನ್ನು ಸಲ್ಲಿಸಲು ತಾಲ್ಲೂಕು ಭೂಮಾಪಕರು, ಕಡೂರುರವರನ್ನು ನ್ಯಾಯಾಲಯದ ನಿಯೋಗಿಯನ್ನಾಗಿ ನೇಮಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

2. **ಅರ್ಜಿದಾರರು ಸದರಿ ಅರ್ಜಿಗೆ ಪೂರಕವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ತನ್ನ ಪ್ರಮಾಣಪತ್ರದಲ್ಲಿ ಈ ಕೆಳಕಂಡಂತೆ ನಮೂದಿಸಿರುತ್ತದೆಃ-**

ತಾನು ಸಲ್ಲಿಸಿರುವಂತಹ ತಕರಾರನ್ನು ಪ್ರಮಾಣ ಪತ್ರದ ಅಂಶಗಳಿಗೆ ಪೂರಕವಾಗಿ ಪರಿಗಣಿಸುವಂತೆ ಕೋರಿರುತ್ತಾರೆ. ಡಿಕ್ರಿದಾರರ ಪ್ರಕಾರವಾಗಿ ಅಸಲು ದಾವಾ ಸಂಖ್ಯೆಃ 208/2011 ರ ದಾವಾ ಅನುಸೂಚಿತ ಸ್ವತ್ತಾದ ಅಸೆಸ್ಮೆಂಟ್ ಸಂಖ್ಯೆ 7795/376/1 ರ 50 ಇಂಟು 30 ಅಡಿಗಳ ಸ್ವತ್ತು ಕಡೂರು ಗ್ರಾಮದ ಸರ್ವೆ ನಂ.118 ರಲ್ಲಿ ಬರುತ್ತದೆ. ತಾನು ತನಗೆ ಸೇರಿದಂತಹ ಕಡೂರು ಗ್ರಾಮದ ಸರ್ವೆ ನಂ.129 ರಲ್ಲಿನ 2.08 ಗುಂಟೆ ಜಮೀನಿನಲ್ಲಿ ಸಿಮೆಂಟ್ ಸೀಟಿನಿಂದ ಕೂಡಿದ ಮೇಲ್ಛಾವಣಿಯ ಕುರಿಯ ಶೆಡ್ಡನ್ನು ನಿರ್ಮಿತಿ ಮಾಡಿಕೊಂಡಿರುತ್ತೇನೆ. ತನ್ನ ತಂದೆಯು ಸುಮಾರು 60 ವರ್ಷಗಳಿಂದ ಸದರಿ ಶೆಡ್ಡನ್ನು ಉಪಯೋಗಿಸುತ್ತಿದ್ದರು. ಡಿಕ್ರಿದಾರರು ಅಮಲ್ಜಾರಿ ಅರ್ಜಿಯ 6 ನೇ ಖಂಡಿಕೆಯಲ್ಲಿ ಹೇಳಿರುವಂತೆ ಅಮಲ್ಜಾರಿ ಅನುಸೂಚಿತ ಸ್ವತ್ತಿನಲ್ಲಿ ಯಾವುದೇ ಶಾಶ್ವತ ನಿರ್ಮಿತಿಯನ್ನು ಮಾಡಿರುವುದಿಲ್ಲ. ಬದಲಾಗಿ ತಾನು ತನಗೆ ಸೇರಿದಂತಹ ಸರ್ವೆ ನಂ.129 ರಲ್ಲಿ ಕುರಿಯ ಶೆಡ್ಡನ್ನು ನಿರ್ಮಿತಿ ಮಾಡಿಕೊಂಡಿರುತ್ತೇನೆ. ಈ ಅಂಶವನ್ನು ಸ್ಪಷ್ಟೀಕರಣ ಮಾಡಿಕೊಳ್ಳಲು ಸ್ಥಳದ ತನಿಖೆ ಮಾಡಿ ವರದಿಯನ್ನು ಸಲ್ಲಿಸಲು ನ್ಯಾಯಾಲಯದ ನಿಯೋಗಿಯನ್ನು ನೇಮಿಸುವ ಅಗತ್ಯತೆ ಇರುತ್ತದೆ. ಹಾಗಾಗಿ ನ್ಯಾಯಾಲಯದ ನಿಯೋಗಿಯನ್ನು ನೇಮಿಸಬೇಕೆಂದು ಕೋರಿರುತ್ತಾರೆ.

3. ಸದರಿ ಅರ್ಜಿಗೆ ಡಿಕ್ರಿದಾರರು ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ. ಬದಲಾಗಿ ಸದರಿ ಅರ್ಜಿಯನ್ನು ಪುರಸ್ಕರಿಸಬಹುದು ಎಂದು ಹಿಂಬರಹ ಮಾಡಿರುತ್ತಾರೆ.

4. ಉಭಯ ಪಕ್ಷಗಾರರ ಹೇಳಿಕೆಗಳನ್ನು ಹಾಗೂ ಸಂಗತಿಗಳನ್ನು ಪರಿಶೀಲಿಸಲಾಗಿ, ನ್ಯಾಯಾಲಯದ ಮುಂದೆ ಈ ಕೆಳಕಂಡ ಅಂಶಗಳು ಆವಗಾಹನೆಗೆ ಬರುತ್ತವೆಃ-

1. **ತೀರ್ಪುಋಣಿದಾರರು/ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ-03 ರಲ್ಲಿ ಕೋರಿರುವಂತೆ ಅಮಲ್ಮಾರಿ ಅನುಸೂಚಿತ ಸ್ವತ್ತನ್ನು ಅಳತೆ ಮಾಡಿ ವರದಿಯನ್ನು ನೀಡಲು ತಾಲ್ಲೂಕು ಭೂಮಾಪಕರು, ಕಡೂರುರವರನ್ನು ನ್ಯಾಯಾಲಯದ ನಿಯೋಗಿಯನ್ನಾಗಿ ನೇಮಿಸಲು ಅರ್ಜಿಯಲ್ಲಿ ಕೋರಿರುವಂತೆ ಪರಿಹಾರವನ್ನು ಪಡೆಯಲು ಅರ್ಹರೇ?**

2. **ಹಾಗಿದ್ದಲ್ಲಿ ಯಾವ ಆದೇಶ?**

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಮೇಲ್ಕಾಣಿಸಿದ ವಿವಾದಾಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆಃ-

ಅಂಶ-1 ಃ ಸಕಾರಾತ್ಮಕವಾಗಿ,

ಅಂಶ-2 ಃ ಅಂತಿಮ ಆದೇಶದಂತೆ,

**ಕಾರಣಗಳು**

**7. ಅಂಶ-1 ಃ** ತೀರ್ಪುಋಣಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-03, ಅಮಲ್ಜಾರಿ ಅರ್ಜಿ ಮತ್ತು ಅದಕ್ಕೆ ಸಲ್ಲಿಸಿರುವ ತಕರಾರು ಹಾಗೂ ಕಡತದಲ್ಲಿನ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

8. ಡಿಕ್ರಿದಾರರು ಪ್ರಸ್ತುತ ಈ ಅಮಲ್ಜಾರಿ ಅರ್ಜಿಯನ್ನು ತೀರ್ಪುಋಣಿದಾರರ ವಿರುದ್ದ ತೀರ್ಪುಋಣಿದಾರರು ಅಸಲು ದಾವಾ ಸಂಖ್ಯೆ 280/2011 ರ ತೀರ್ಪು ಮತ್ತು ಡಿಕ್ರಿಯನ್ನು ಉಲಂಘನೆ ಮಾಡಿದ್ದು, ಹಾಗಾಗಿ ತೀರ್ಪುಋಣಿದಾರರನ್ನು ಸಿವಿಲ್

ಬಂದಿಖಾನೆಗೆ ಒಳಪಡಿಸುವಂತೆ ಹಾಗೂ ತೀರ್ಪುಋಣಿದಾರರ ಸ್ವತ್ತನ್ನು ಜಪ್ತಿ ಮಾಡುವ ಕುರಿತಾಗಿ ಕೋರಿರುತ್ತಾರೆ.

9. ಮಧ್ಯಂತರ ಅರ್ಜಿಯ ಕುರಿತು ವಾದ ಮಂಡನೆಯ ಕಾಲಕ್ಕೆ ತೀರ್ಪುಋಣಿದಾರರ ಪರ ವಕೀಲರು ಡಿಕ್ರಿದಾರರು ಪ್ರಸ್ತುತ ಈ ಅಮಲ್ಜಾರಿ ಅರ್ಜಿಯನ್ನು ಕಡೂರು ಗ್ರಾಮದ ಸರ್ವೆ ನಂ.118 ರ ನಿವೇಶನ ಸಂಖ್ಯೆ 18 ರ ಅಸೆಸ್ಮೆಂಟ್ ಸಂಖ್ಯೆ 7795/376/1 ರ 50 ಇಂಟು 30 ಅಡಿಗಳ ಕುರಿತಾಗಿ ಅಮಲ್ಜಾರಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಸ್ವತ್ತು ಅಸಲು ದಾವಾ ಸಂಖ್ಯೆ 280/2011 ರ ದಾವಾ ಅನುಸೂಚಿತ ಸ್ವತ್ತು ಆಗಿತ್ತು ಎಂದು ಹೇಳಿರುತ್ತಾರೆ. ಆದರೆ ತೀರ್ಪುಋಣಿದಾರರು ಕಡೂರು ಗ್ರಾಮ ಸರ್ವೆ ನಂ. 129 ರ 2.08 ಗುಂಟೆ ಸ್ವತ್ತಿನಲ್ಲಿ ಆತನ ತಂದೆ ಕಾಲದಿಂದಲೂ ಸುಮಾರು 60 ವರ್ಷಗಳಿಂದ ಕುರಿ ಶೆಡ್ಡನ್ನು ಮಾಡಿಕೊಂಡು ಉಪಯೋಗಿಸುತ್ತಿದ್ದು, ಡಿಕ್ರಿದಾರರು ಅಮಲ್ಮಾರಿ ಅನುಸೂಚಿತ ಸ್ವತ್ತಿನಲ್ಲಿ ಯಾವುದೇ ಶಾಶ್ವತ ನಿರ್ಮಿತಿಯನ್ನು ಮಾಡಿರುವುದಿಲ್ಲ ಎಂದು ಹೇಳಿರುತ್ತಾರೆ. ಹಾಗಾಗಿ ಡಿಕ್ರಿದಾರರು ಮತ್ತು ತೀರ್ಪುಋಣಿದಾರರಿಗೆ ಸೇರಿದ ಸ್ವತ್ತುಗಳನ್ನು ಅಳತೆ ಮಾಡಿ ಹದ್ದುಬಸ್ತು ಮಾಡುವುದರಿಂದ ಉಭಯ ಪಕ್ಷಗಾರರ ಸ್ವತ್ತುಗಳ ಕುರಿತಾಗಿ ಸಂಪೂರ್ಣ ಮಾಹಿತಿ ಪಡೆದಂತಾಗುತ್ತದೆ ಎಂದು, ಆದ್ದರಿಂದ ನ್ಯಾಯಾಲಯದ ನಿಯೋಗಿಯ ಅಗತ್ಯತೆ ಇರುತ್ತದೆ ಎಂದು ಹೇಳಿರುತ್ತಾರೆ. ಇದಕ್ಕೆ ಪೂರಕವಗಿ ಡಿಕ್ರಿದಾರರ ಪರ ವಕೀಲರು ಸದರಿ ಅರ್ಜಿಯನ್ನು ಪುರಸ್ಕರಿಸಬಹುದು ಎಂದು ಹಿಂಬರಹ ಮಾಡಿರುತ್ತಾರೆ.

10. ಡಿಕ್ರಿದಾರರು ಪ್ರಸ್ತುತ ಈ ಅಮಲ್ಜಾರಿ ಅರ್ಜಿಯನ್ನು ತೀರ್ಪುಋಣಿದಾರರ ವಿರುದ್ದ ತೀರ್ಪುಋಣಿದಾರರು ಅಸಲು ದಾವಾ ಸಂಖ್ಯೆ 280/2011 ರ ತೀರ್ಪು ಮತ್ತು ಡಿಕ್ರಿಯನ್ನು ಉಲ್ಲಂಘನೆ ಮಾಡಿದ್ದು, ಹಾಗಾಗಿ ತೀರ್ಪುಋಣಿದಾರರನ್ನು ಸಿವಿಲ್ ಬಂದಿಖಾನೆಗೆ ಒಳಪಡಿಸುವಂತೆ ಹಾಗೂ ತೀರ್ಪುಋಣಿದಾರರ ಸ್ವತ್ತನ್ನು ಜಪ್ತಿ ಮಾಡುವ ಕುರಿತಾಗಿ ಕೋರಿರುತ್ತಾರೆ. ಆದ್ದರಿಂದ, ಅಮಲ್ಜಾರಿ ಸ್ವತ್ತನ್ನು ಹಾಗೂ ತೀರ್ಪುಋಣಿದಾರರಿಗೆ ಸೇರಿದ ಸ್ವತ್ತನ್ನು ಅಳತೆ ಮಾಡಿ ವರದಿಯನ್ನು ನೀಡಿದ್ದಲ್ಲಿ ಪ್ರಸ್ತುತ ಅಸ್ಥಿತ್ವದಲ್ಲಿ ಇರುವ ಸ್ವತ್ತುಗಳ ಕುರಿತಾಗಿ ಸ್ಪಷ್ಟ ಮಾಹಿತಿ ಲಭ್ಯವಾಗುತ್ತದೆ.

ಅಲ್ಲದೆ, ಉಭಯ ಪಕ್ಷಗಾರರ ನಡುವಣ ವಿವಾದವು ತಾರ್ಕಿಕ ರೂಪದಲ್ಲಿ ಅಂತಿಮತೆಯನ್ನು ಕಾಣಲು ಸಾಧ್ಯವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಡಿಕ್ರಿದಾರರು ಮತ್ತು ತೀರ್ಪುಋಣಿದಾರರ ನಡುವಣ ವಿವಾದದ ಕುರಿತು ಉಂಟಾಗಬಹುದಾದ ವ್ಯಾಜ್ಯಗಳ ಬಾಹುಳ್ಯತೆಯನ್ನು ತಡೆಯಲು ಹಾಗೂ ಉಭಯ ಪಕ್ಷಗಾರರ ನಡುವಣ ವಿವಾದದ ಕುರಿತು ಸ್ಪಷ್ಟ ನಿರ್ಣಯವನ್ನು ನೀಡಲು ನ್ಯಾಯಾಲಯದ ನಿಯೋಗಿಯ ವರದಿಯು ತುಂಬಾ ಸಹಕಾರಿಯಾಗುತ್ತದೆ. ಆದ್ದರಿಂದ, ತೀರ್ಪುಋಣಿದಾರರ ಪ್ರಾರ್ಥನೆಯಂತೆ ಅಮಲ್ಜಾರಿ ಸ್ವತ್ತಿನ ಕುರಿತಾಗಿ ಹಾಗೂ ತೀರ್ಪುಋಣಿದಾರರಿಗೆ ಸೇರಿದ ಸ್ವತ್ತಿನ ಕುರಿತಾಗಿ ಅಳತೆ ಮಾಡಿ ವರದಿಯನ್ನು ಸಲ್ಲಿಸಲು ನ್ಯಾಯಾಲಯದ ನಿಯೋಗಿಯನ್ನು ನೇಮಿಸಲು ನ್ಯಾಯಾಲಯವು ನಿರ್ಣಯಕ್ಕೆ ಬರುತ್ತದೆ. ಆದ್ದರಿಂದ ನ್ಯಾಯಾಲಯದ ನಿಯೋಗಿಯನ್ನು ನೇಮಿಸುವುದರಿಂದ ಸಾಕ್ಷ್ಯದ ಕ್ರೂಢೀಕರಣ ಮಾಡಿದಂತಾಗುವುದಿಲ್ಲ ಎಂದು ನ್ಯಾಯಾಲಯವು ತೀರ್ಮಾನಕ್ಕೆ ಬರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಉಭಯ ಪಕ್ಷಗಾರರ ನಡುವಣ ಸ್ವತ್ತುಗಳ ಕುರಿತಾಗಿ ವಿವಾದವನ್ನು ಬಗೆಹರಿಸುವ ಸಲುವಾಗಿ ಹಾಗೂ ವ್ಯಾಜ್ಯಗಳ ಬಾಹುಳ್ಯತೆಯನ್ನು ತಡೆಯುವ ಸಲುವಾಗಿ ನ್ಯಾಯಾಲಯದ ನಿಯೋಗಿಯನ್ನು ನೇಮಿಸುವುದು ಅಗತ್ಯತೆ ಇರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿದ್ದಲ್ಲಿ ಡಿಕ್ರಿದಾರರಿಗೆ ಯಾವುದೇ ರೀತಿಯ ಹಾನಿಯುಂಟಾಗುವುದಿಲ್ಲವೆಂದು ನ್ಯಾಯಾಲಯವು ನಿರ್ಣಯಕ್ಕೆ ಬರುತ್ತದೆ. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ಅಂಶ-1 ನ್ನು ಸಕಾರಾತ್ಮಕ ಎಂದು ನಿರ್ಣಯಿಸಲಾಗಿದೆ.

**11.** **<u>ಅಂಶ – 2 :</u>** ಈಗಾಗಲೇ ಅಂಶ-1 ನ್ನು ಸಕಾರಾತ್ಮಕವೆಂದು ನಿರ್ಣಯಿಸಿರುವುದರಿಂದ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ:-

**<u>ಆದೇಶ</u>**

ತೀರ್ಪುಋಣಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-03 ಪುರಸ್ಕರಿಸಲಾಗಿದೆ. ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ.

ಅಮಲ್ಜಾರಿ ಅನುಸೂಚಿತ ಸ್ವತ್ತನ್ನು ಮತ್ತು ತೀರ್ಪುಋಣಿದಾರರ ಸ್ವತ್ತನ್ನು ಪರಿಶೀಲನೆ ಮಾಡಿ, ಹದ್ದುಬಸ್ತು ಕಾರ್ಯವನ್ನು ನಿರ್ವಹಿಸಿ, ಅಳತೆ ಮಾಡಿ, ಚಕ್ಕುಬಂದಿಯನ್ನು ಗುರುತಿಸಿ, ನಕ್ಷೆಯೊಂದಿಗೆ ವರದಿಯನ್ನು ಸಲ್ಲಿಸಲು ತಾಲ್ಲೂಕು ಭೂಮಾಪಕರು, ಕಡೂರುರವರನ್ನು ಹಾಗೂ ಸಿವಿಲ್ ಅಭಿಯಂತರರು, ಪುರಸಭೆ, ಕಡೂರುರವರನ್ನು ನ್ಯಾಯಾಲಯದ ನಿಯೋಗಿಯಾಗಿ ಕಾರ್ಯ ನಿರ್ವಹಿಸುವಂತೆ ನೇಮಿಸಲಾಗಿದೆ.

ನ್ಯಾಯಾಲಯದ ನಿಯೋಗಿಯ ವೆಚ್ಚವಾಗಿ ತಲಾ ರೂ.1,500/- ಮೊತ್ತವನ್ನು ನ್ಯಾಯಾಲಯದಲ್ಲಿ ಠೇವಣಿ ಮಾಡಲು ವಾದಿಗೆ ಸೂಚಿಸಲಾಗಿದೆ.

ಉಭಯ ಪಕ್ಷಗಾರರಿಗೆ ತಮ್ಮ ತಮ್ಮ ಮಾರ್ಗಸೂಚಿಯನ್ನು ಸಲ್ಲಿಸಲು ಹಾಗೂ ನ್ಯಾಯಾಲಯದ ನಿಯೋಗಿಯ ಶುಲ್ಕವನ್ನು ಠೇವಣಿ ಮಾಡಲು ನಿಗದಿಪಡಿಸಿ ಪ್ರಕರಣವನ್ನು ದಿನಾಂಕ 21.06.2021 ಕ್ಕೆ ಮುಂದೂಡಲಾಗಿದೆ.

(ಈ ಆದೇಶವನ್ನು ಬೆರಳಚ್ಚುಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 03 ನೇ ಜೂನ್ 2021 ರಂದು ನಾನು ಉದ್ಘೋಷಿಸಿದ್ದೇನೆ.)

(ರಘುರಾಮ ಎನ್.ಎಸ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕಡೂರು.